**Akashvani : Bangalore**
**National Bulletin In Kannada**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.11.2024 / 19.35 hrs**

ಮುಖ್ಯಾಂಶಗಳು

**೧. ಭಾರತ-ಚೀನಾ ನಡುವಿನ ಪರಸ್ಪರ ತಿಳಿವಳಿಕೆಯಂತೆ ಡೆಮ್‌ಚಾಕೊ ಮತ್ತು ಡೆಪ್ಸಂಗ್ ವಲಯಗಳಲ್ಲಿ ಭದ್ರತಾ ಗಸ್ತು ಪರಿಶೀಲನಾ ಕಾರ್ಯ ಆರಂಭ**

**೨. ಕೆನಡಾ ಸ್ಥಾಯಿ ಸಮಿತಿಯಲ್ಲಿ ಉಪ ಸಚಿವ ಡೇವಿಡ್ ಮಾರಿಸನ್ ಹೇಳಿಕೆ; ಭಾರತದ ಬಲವಾದ ಪ್ರತಿಭಟನೆ**

**೩. ಕಾನ್ಪುರ ಫೀಲ್ಡ್ ಗನ್ ಕಾರ್ಖಾನೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭೇಟಿ**

**೪. ಚಳಿಗಾಲದ ಆಗಮನ; ಚಾರಧಾಮ್ ದ್ವಾರ ಮುಚ್ಚುವ ಕಾರ್ಯ ಆರಂಭ**

**೫. ಮುಂಬೈ ಟೆಸ್ಟ್ ಕ್ರಿಕೆಟ್; ಭಾರತದ ವಿರುದ್ಧ ಎರಡನೇ ಇನ್ನಿಂಗ್ಸ್‌ನಲ್ಲಿ ನ್ಯೂಜಿಲೆಂಡ್ ೧೪೩ ರನ್ ಮುನ್ನಡೆ**

**<><*<><>*><>**

ಭಾರತ-ಚೀನಾ ನಡುವಿನ ಪರಸ್ಪರ ತಿಳಿವಳಿಕೆಯಂತೆ ಡೆಮ್‌ಚಾಕೊ ಮತ್ತು ಡೆಪ್ಸಂಗ್ ವಲಯಗಳಲ್ಲಿ ಭದ್ರತಾ ಗಸ್ತು ಪರಿಶೀಲನಾ ಕಾರ್ಯ ಆರಂಭವಾಗಿದೆ. ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ರಣದೀರ್ ಜೈಸ್ವಾಲ್ ನವದೆಹಲಿಯಲ್ಲಿಂದು ಈ ವಿಷಯ ತಿಳಿಸಿದ್ದಾರೆ. ಕಜಾನ್‌ದಲ್ಲಿ ಇತ್ತೀಚೆಗೆ ನಡೆದ ಸಭೆಯ ಒಪ್ಪಂದದಂತೆ ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ವಿದೇಶಾಂಗ ಸಚಿವರ ಹಾಗೂ ಅಧಿಕಾರಿ ಮಟ್ಟದ ಮಾತುಕತೆ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುವುದು ಎಂದು ಅವರು ಹೇಳಿದರು.

**<><*<><>*><>**

ಕೆನಡಾದ ಸಾರ್ವಜನಿಕ ಸುರಕ್ಷತೆ ಮತ್ತು ರಾಷ್ಟ್ರೀಯ ಭದ್ರತೆ ಸ್ಥಾಯಿ ಸಮಿತಿ ಮುಂದೆ, ಅಲ್ಲಿನ ಉಪ ಸಚಿವ ಡೇವಿಡ್ ಮಾರಿಸನ್, ಭಾರತದ ಗೃಹ ಸಚಿವ ಅಮಿತ್ ಶಾ ಅವರ ಹೆಸರನ್ನು ಉಲ್ಲೇಖಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಭಾರತ ತನ್ನ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿದೆ. ಈ ಕುರಿತಂತೆ ಭಾರತದ ವಿದೇಶಾಂಗ ವ್ಯವಹಾರ ಸಚಿವಾಲಯ, ನಿನ್ನೆ ದೆಹಲಿಯಲ್ಲಿ ಕೆನಡಾ ಹೈಕಮಿಷನ್‌ನ ಪ್ರತಿನಿಧಿಗಳನ್ನು ಕರೆಯಿಸಿ, ಕಳೆದ ತಿಂಗಳ ೨೯ ರಂದು ಒಟ್ಟಾವದಲ್ಲಿ ಸ್ಥಾಯಿ ಸಮಿತಿ ನಡೆಸಿದ ಕಲಾಪದ ಬಗ್ಗೆ ರಾಜತಾಂತ್ರಿಕ ಪತ್ರ ನೀಡಿ ಪ್ರತಿಭಟನೆ ವ್ಯಕ್ತಪಡಿಸಿದೆ. ಕೆನಡಾದ ಉನ್ನತ ಅಧಿಕಾರಿಗಳು ಅಂತಾರಾಷ್ಟ್ರೀಯ ಮಾಧ್ಯಮಗಳ ಮುಂದೆ ಅಸಂಗತ ವಿಚಾರಗಳನ್ನು ಉದ್ದೇಶ ಪೂರ್ವಕವಾಗಿ ಸೋರಿಕೆ ಮಾಡಿರುವುದು ದ್ವಿಪಕ್ಷೀಯ ರಾಜಕೀಯ ಒಪ್ಪಂದಗಳ ಉಲ್ಲಂಘನೆಯಾಗಿದೆ ಎಂದು ತಿಳಿಸಿರುವುದಾಗಿ ನವದೆಹಲಿಯಲ್ಲಿಂದು ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ರಣದೀರ್ ಜೈಸ್ವಾಲ್ ಹೇಳಿದ್ದಾರೆ.

**<><*<><>*><>**

ಉತ್ತರಪ್ರದೇಶದ ಕಾನ್ಪುರದಲ್ಲಿರುವ ಭಾರತದ ಆಧುನಿಕ ಶಸ್ತ್ರಾಸ್ತ್ರ ಮತ್ತು ಉಪಕರಣಗಳ ಸಂಸ್ಥೆಯ ಫೀಲ್ಡ್ ಗನ್ ಕಾರ್ಖಾನೆಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಟಿ-೯೦ ಟ್ಯಾಂಕ್ ಮತ್ತು ಧನುಷ್ ಗನ್ ಸೇರಿದಂತೆ ವಿವಿಧ ಶಸ್ತ್ರಾಸ್ತ್ರ ಗನ್‌ಗಳನ್ನು ಮತ್ತು ಟ್ಯಾಂಕರ್‌ಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸಲಾಗುತ್ತದೆ. ರಾಜನಾಥ್ ಸಿಂಗ್, ಪ್ರಮುಖ ದೇಶಿಯ ರಕ್ಷಣಾ ಸಾಮರ್ಥ್ಯಗಳನ್ನು ವೀಕ್ಷಿಸಿದರು. ರಕ್ಷಣಾ ಉತ್ಪಾದನೆ ಕಾರ್ಯದರ್ಶಿ ಸಂಜೀವ್ ಕುಮಾರ್, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಡಿಆರ್‌ಡಿಒ ಅಧ್ಯಕ್ಷ ಡಾ.ಸಮೀರ್ ಕಾಮತ್ ಸಚಿವರೊಂದಿಗೆ ಪರಿಶೀಲನೆಯಲ್ಲಿ ಪಾಲ್ಗೊಂಡಿದ್ದರು. ಕೇಂದ್ರ ಸರ್ಕಾರ ರಕ್ಷಣಾ ವಲಯಕ್ಕೆ ಆದ್ಯತೆ ನೀಡುತ್ತಿದ್ದು, ದೇಶೀಯ ತಯಾರಿಕೆ ಬಲವರ್ಧನೆ ಮೂಲಕ ೨೦೨೮-೨೯ ರ ವೇಳೆಗೆ ೫೦ ಸಾವಿರ ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ಸಲಕರಣೆ ರಫ್ತು ಮಾಡುವ ಉದ್ದೇಶವಿದೆ ಎಂದು ಸಚಿವರು ಇತ್ತೀಚೆಗೆ ಹೇಳಿದ ಹಿನ್ನೆಲೆಯಲ್ಲಿ ಪ್ರಸ್ತುತ ಭೇಟಿ ಮಹತ್ವದ್ದೆನಿಸಿದೆ. ಸರ್ಕಾರಕ್ಕೆ ರಕ್ಷಣಾ ಉಪಕರಣಗಳ ಬಲವರ್ಧನೆಯಲ್ಲಿ ಹಿಂದೂಸ್ತಾನ್ ಏರೋನಾಟಿಕಲ್ ಲಿಮಿಟೆಡ್, ಟಾಟಾ ಮತ್ತು ಎಲ್‌ಎನ್‌ಟಿ ಗಳಂತಹ ದೇಶೀಯ ಕಂಪನಿಗಳ ಸಾಮರ್ಥ್ಯದಲ್ಲಿ ವಿಶ್ವಾಸವಿದೆ ಎಂದು ರಕ್ಷಣಾ ಸಚಿವರು ಹೇಳಿರುವುದು ಗಮನಾರ್ಹವಾಗಿದೆ.

<><*<><>*><>

ಭಾರತದ ಉನ್ನತ ಮಟ್ಟದ ನಿಯೋಗದ ಸಕ್ರಿಯ ಪಾತ್ರದಿಂದಾಗಿ ವಿಪತ್ತು ಅಪಾಯ ಕಡಿಮೆಗೊಳಿಸುವ ಜಿ-೨೦ ಮೊದಲ ಘೋಷಣೆ ಅಂತಿಮಗೊಳಿಸಲು ಒಮ್ಮತ ಅಭಿಪ್ರಾಯಕ್ಕೆ ಬರಲಾಗಿದೆ. ಬ್ರೆಜಿಲ್‌ನ ಬೆಲೆಮ್‌ನಲ್ಲಿ ನಿನ್ನೆ ಮುಕ್ತಾಯಗೊಂಡ ಮೂರು ದಿನಗಳ ಜಿ-೨೦ ವಿಪತ್ತು ಅಪಾಯ ಕಡಿಮೆಗೊಳಿಸುವ ಕಾರ್ಯಕಾರಿ ಗುಂಪಿನ ಸಚಿವ ಮಟ್ಟದ ಸಭೆಯಲ್ಲಿ ಈ ಬಗ್ಗೆ ತೀರ್ಮಾನಕ್ಕೆ ಬರಲಾಗಿದೆ ಎಂದು ಇಂದು ನೀಡಲಾದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಈ ಸಭೆಯಲ್ಲಿ ಪಾಲ್ಗೊಂಡ ಪ್ರಧಾನಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಪಿ.ಕೆ.ಮಿಶ್ರಾ, ವಿಪತ್ತು ಅಪಾಯ ತಡೆಗಟ್ಟಲು ಭಾರತ ಸರ್ಕಾರ ಕೈಗೊಂಡ ವಿವಿಧ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಮುನ್ನೆಚ್ಚರಿಕೆ ವ್ಯವಸ್ಥೆ, ವಿಕೋಪ ನಿರೋಧಕ ಮೂಲ ಸೌಕರ್ಯ, ವಿಪತ್ತು ಅಪಾಯ ತಡೆಗಟ್ಟಲು ನಿಧಿ ಸೌಲಭ್ಯ ಹಾಗೂ ನೈಸರ್ಗಿಕ ಪರಿಹಾಗಳ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ವಿವರ ನೀಡಿದರು.

<><*<><>*><>

ಭಾರತ ಪ್ರವಾಸದಲ್ಲಿರುವ ಥೈಲೆಂಡ್‌ನ ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಮಾರೀಸ್ ಸಂಗಿಯಾಂಪೊಂಗಸ್, ನವದೆಹಲಿಯಲ್ಲಿಂದು ಭಾರತದ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಉಭಯ ದೇಶಗಳ ವಿವಿಧೋದ್ದೇಶಿತ ಸಹಕಾರ ಮತ್ತು ಪ್ರಾದೇಶಿಕ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದ್ದಾಗಿ ಡಾ.ಎಸ್.ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಗುರುವಾರ ನವದೆಹಲಿಗೆ ಆಗಮಿಸಿದ ಥೈಲೆಂಡ್‌ನ ಸಚಿವ ಮಾರೀಸ್‌ಸಂಗಿಯಾಂಪೊಂಗಸ್, ನಿನ್ನೆ ವಿವೇಕಾನಂದ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಸದಸ್ಯರೊಂದಿಗೆ ವಿಚಾರ ವಿನಿಮಯ ನಡೆಸಿದರು. 'ಟು ವರ್ಡ್ಸ್ ದ ಏಷಿಯನ್ ಸೆಂಚುರಿ ಆಫ್ ದಮ್ಮಾ' ಕುರಿತಂತೆ ವಿಶೇಷ ಉಪನ್ಯಾಸ ನೀಡಿದ ಅವರು, ಜಗತ್ತಿನಲ್ಲಿ ಶಾಂತಿ ಮತ್ತು ಸುಸ್ಥಿರತೆಯನ್ನು ಕಾಪಾಡಿಕೊಂಡು ಬರಲು ಭಗವಾನ್ ಬುದ್ಧರ ಉಪದೇಶಗಳನ್ನು ಸಾರುವಲ್ಲಿ ಭಾರತ-ಥೈಲೆಂಡ್ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

<><*<><>*><>

ಜಾರ್ಖಂಡ್‌ನಲ್ಲಿ ಹೇಮಂತ್ ಸುರೇನ್ ನೇತೃತ್ವದ ಸರ್ಕಾರ, ಯುವ ಜನತೆಯನ್ನು ಮೋಸಗೊಳಿಸುತ್ತಿದೆ ಎಂದು ಬಿಜೆಪಿ ಆಪಾದಿಸಿದೆ. ಜಾರ್ಖಂಡ್ ಚುನಾವಣೆಯ ಉಸ್ತುವಾರಿ ವಹಿಸಿರುವ ಬಿಜೆಪಿಯ ಶಿವರಾಜ್‌ಸಿಂಗ್ ಚೌಹಾಣ್ ಅವರು, ರಾಂಚಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದರೆ ೨ ಲಕ್ಷ ೮೭ ಸಾವಿರ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರವನ್ನು ಮೊದಲ ಸಚಿವ ಸಂಪುಟ ಸಭೆಯಲ್ಲೇ ಕೈಗೊಳ್ಳಲಿದೆ ಎಂದು ಹೇಳಿದರು. ಈ ಮಧ್ಯೆ ಹಿರಿಯ ಜೆಎಮ್‌ಎಮ್ ಮುಖಂಡ ಹಾಗೂ ಮುಖ್ಯಮಂತ್ರಿ ಹೇಮಂತ್ ಸುರೇನ್ ಅವರು, ರಾಜ್ಯದ ಜನತೆ ಮತದಾನ ಹಕ್ಕು ಚಲಾಯಿಸುವ ಮೂಲಕ ತಮ್ಮ ಕೆಲಸದ ಮೌಲ್ಯಮಾಪನ ಮಾಡಲಿದ್ದಾರೆ ಎಂದು ಹೇಳಿದ್ದಾರೆ.

<><*<><>*><>

ಚಳಿಗಾಲ ಆಗಮನದ ಹಿನ್ನೆಲೆಯಲ್ಲಿ ಉತ್ತರಾಖಂಡ್‌ದಲ್ಲಿರುವ ನಾಲ್ಕು ಚಾರ್‌ಧಾಮ್‌ಗಳಲ್ಲಿ ಒಂದಾದ ಗಂಗೋತ್ರಿಧಾಮ್ ದ್ವಾರಗಳನ್ನು ಇಂದು ಹಾಕಲಾಯಿತು. ಭಕ್ತ ಸಮೂಹದ ಸಮ್ಮುಖದಲ್ಲಿ ಮಧ್ಯಾಹ್ನ ೧೨ ಗಂಟೆ ೧೪ ನಿಮಿಷಕ್ಕೆ ಅಭಿಜಿನ್ ಸುಮುಹೂರ್ತದಲ್ಲಿ ಸಂಪ್ರದಾಯದಂತೆ ದ್ವಾರಗಳನ್ನು ಮುಚ್ಚಲಾಯಿತು. ಉತ್ತರ ಕಾಶಿ ಜಿಲ್ಲೆಯಲ್ಲಿರುವ ಗಂಗೋತ್ರಿಧಾಮಕ್ಕೆ ಈ ವರ್ಷ ೮ ಲಕ್ಷಕ್ಕೂ ಅಧಿಕ ಯಾತ್ರಾರ್ಥಿಗಳು ಭೇಟಿ ನೀಡಿದ್ದಾರೆ. ನಾಳೆ ಬೈದೂಜ್ ಆಚರಣೆ ಸಂದರ್ಭದಲ್ಲಿ ರುದ್ರಪ್ರಯಾಗದಲ್ಲಿರುವ ಕೇದರಾನಾಥ ಧಾಮ ಹಾಗೂ ಉತ್ತರ ಕಾಶಿಯಲ್ಲಿರುವ ಯಮುನೋತ್ರಿ ಧಾಮಗಳ ದ್ವಾರಗಳನ್ನು ಸಂಪ್ರದಾಯದಂತೆ ಮುಚ್ಚುವ ಸಿದ್ಧತೆಗಳು ನಡೆದಿವೆ.

<><*<><>*><>

ಛತ್ ಹಬ್ಬದ ಸಂದರ್ಭದಲ್ಲಿ ಭಾರತೀಯ ರೈಲ್ವೆ, ಪ್ರಯಾಣಿಕರ ಅನುಕೂಲಕ್ಕಾಗಿ ವಿಶೇಷ ರೈಲು ಸಂಚಾರ ವ್ಯವಸ್ಥೆ ಮಾಡಿದೆ. ಈ ರೈಲುಗಳು ರಾಷ್ಟ್ರೀಯ ರಾಜಧಾನಿ ಆನಂದ್ ವಿಹಾರ್, ನ್ಯೂ ಡೆಲ್ಲಿ, ಮತ್ತು ನಿಜಾಮುದ್ದೀನ್ ರೈಲ್ವೆ ಸ್ಟೇಷನ್‌ಗಳಿಂದ ಹೊರಡಲಿವೆ. ಹಬ್ಬದ ಸಂದರ್ಭದಲ್ಲಿ ಉತ್ತರ ರೈಲ್ವೆ ವಲಯದಿಂದ ೩ ಸಾವಿರದ ೨೦೦ ವಿಶೇಷ ರೈಲುಗಳ ಸಂಚಾರ ವ್ಯವಸ್ಥೆ ಮಾಡಲಾಗಿದೆ ಎಂದು ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಹಿಮಾಂಶು ಶೇಖರ್ ಉಪಾಧ್ಯಾಯ ತಿಳಿಸಿದ್ದಾರೆ.

<><*<><>*><>

ವಿಕಸಿತ ಭಾರತದ ಗುರಿಯನ್ನು ಸಾಕಾರಗೊಳಿಸಲು ಯುವಜನತೆ ದೇಶೀಯವಾಗಿ ಉನ್ನತ ಮಟ್ಟದ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕರೆ ನೀಡಿದ್ದಾರೆ. ಅವರು, ಕಾನ್ಪುರ್ ಐಐಟಿ ಸಂಸ್ಥೆಯ ೬೫ನೇ ಪ್ರತಿಷ್ಠಾನ ದಿನದ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ವಿವಿಧ ಕ್ಷೇತ್ರಗಳಲ್ಲಿ ತ್ವರಿತ ಅಭಿವೃದ್ಧಿ ಸಾಧಿಸಲು ತಂತ್ರಜ್ಞಾನ ಮುಖ್ಯ ಚಾಲಕ ಶಕ್ತಿಯಾಗಿದೆ ಎಂದು ಹೇಳಿದ ಅವರು, ಭಾರತ ತಂತ್ರಜ್ಞಾನದ ಮುಂಚೂಣಿಯಲ್ಲಿ ನಿಂತು ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.

<><*<><>*><>

ಕೇಂದ್ರ ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ.ಎಸ್.ಜೈಶಂಕರ್, ಆಸ್ಟ್ರೇಲಿಯಾ ಮತ್ತು ಸಿಂಗಾಪುರ್ ಭೇಟಿಗಾಗಿ ನಾಳೆಯಿಂದ ಆರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಡಾ.ಎಸ್.ಜೈಶಂಕರ್ ಅವರು, ಬ್ರಿಸ್‌ಬೇನ್‌ನಲ್ಲಿ ಭಾರತದ ನಾಲ್ಕನೇ ಕಾನ್ಸುಲೇಟ್ ಉದ್ಘಾಟಿಸಲಿದ್ದಾರೆ. ಕೆನಬೆರಾದಲ್ಲಿ ಆಸ್ಟ್ರೇಲಿಯನ್ ವಿದೇಶಾಂಗ ಸಚಿವ ಪೆನ್ನಿವೋಂಗ್ ಅವರೊಂದಿಗೆ ವಿದೇಶಾಂಗ ಸಚಿವರ ೧೫ನೇ ಚೌಕಟ್ಟು ಮಾತುಕತೆಯ ಸಹಅಧ್ಯಕ್ಷತೆ ವಹಿಸಲಿದ್ದಾರೆ. ಆಸ್ಟ್ರೇಲಿಯಾದ ಸಂಸತ್ತಿನಲ್ಲಿ ನಡೆಯಲಿರುವ ಎರಡನೇ ರೈಸಿನಾ ಡೌನ್ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಪ್ರದಾನ ಭಾಷಣ ಮಾಡಲಿದ್ದಾರೆ. ಆಸ್ಟ್ರೇಲಿಯಾದ ನಾಯಕರು, ಸಂಸದರು, ಭಾರತೀಯ ಸಮುದಾಯದ ಧುರೀಣರು, ವ್ಯಾಪಾರ ಸಮುದಾಯದವರೊಂದಿಗೆ ಅವರು ಮಾತುಕತೆ ನಡೆಸಲಿದ್ದಾರೆ. ನಂತರ ಡಾ.ಎಸ್.ಜೈಶಂಕರ್ ಅವರು, ಇದೇ ೮ ರಂದು ಸಿಂಗಾಪುರಕ್ಕೆ ತೆರಳಿ, ಭಾರತ-ಆಸಿಯಾನದ ೮ನೇ ದುಂಡು ಮೇಜಿನ ವಿಚಾರ ಮಂಥನ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಬಲಪಡಿಸುವುದರ ಬಗ್ಗೆಯೂ ಸಿಂಗಾಪುರದ ಧುರೀಣರೊಂದಿಗೆ ಮಾತುಕತೆ ನಡೆಸಲಿದ್ದಾರೆ.

<><*<><>*><>

ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಅಲ್ಕನ್ ಗಲಿ ಪ್ರದೇಶದಲ್ಲಿ ಭದ್ರತಾ ಪಡೆಯವರು ನಡೆಸಿದ ಕಾರ್ಯಾಚರಣೆಯಲ್ಲಿ ಇಬ್ಬರು ಭಯೋತ್ಪಾದಕರು ಮೃತಪಟ್ಟಿದ್ದಾರೆ. ಈ ಪ್ರದೇಶದಲ್ಲಿ ಭಯೋತ್ಪಾದಕರ ಉಪಸ್ಥಿತಿ ಇರುವ ಸುಳಿವಿನ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು ಎಂದು ಶ್ರೀನಗರದಲ್ಲಿ ನೆಲೆಗೊಂಡಿರುವ ಭದ್ರತಾಪಡೆಗಳ ಮೂಲಗಳು ತಿಳಿಸಿವೆ. ಶ್ರೀನಗರದ ಕನ್ಯಾರ್ ಪ್ರದೇಶದಲ್ಲಿಯೂ ಭಯೋತ್ಪಾದಕರು ಮತ್ತು ಭದ್ರತಾಪಡೆಗಳ ನಡುವೆ ಗುಂಡಿನ ಚಕಮಕಿಯಾಗಿದ್ದು, ಓರ್ವ ಭಯೋತ್ಪಾದಕರ ಮೃತಪಟ್ಟಿದ್ದಾನೆ. ಸಿಆರ್‌ಪಿಎಫ್‌ನ ನಾಲ್ವರು ಸೈನಿಕರು ಗಾಯಗೊಂಡಿದ್ದಾರೆ.

<><*<><>*><>

ಇಸ್ಕಾನ್‌ನಿನ ಬ್ರಹ್ಮಚಾರಿ ಚಿನ್ಮಯ್ ಕೃಷ್ಣದಾಸ್ ಸೇರಿದಂತೆ ೧೯ ಜನರ ವಿರುದ್ಧ ಹಾಕಲಾದ ತಪ್ಪು ಪ್ರಕರಣ ದಾಖಲೆಯನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿ ಸನಾತನ ಜಾಗರಣ ಮಂಚ ಬಾಂಗ್ಲಾದೇಶದ ಚಟ್ಟೋಗ್ರಾಮ್‌ದಲ್ಲಿ ನಿನ್ನೆ ಬೃಹತ್ ರ್‍ಯಾಲಿ ನಡೆಸಿತು. ನಾಳೆಯೊಳಗಡೆ ಈ ಪ್ರಕರಣವನ್ನು ಹಿಂತೆಗೆದುಕೊಳ್ಳದಿದ್ದರೆ, ಸರಣಿ ಪ್ರತಿಭಟನೆ ನಡೆಸುವುದಾಗಿ ಈ ವೇದಿಕೆ ಹೇಳಿದೆ. ಚಿನ್ಮಯ್ ಕೃಷ್ಣದಾಸ್, ಬಾಂಗ್ಲಾದೇಶದಲ್ಲಿ ಹಿಂದುಗಳು ಹಾಗೂ ಇತರ ಅಲ್ಪಸಂಖ್ಯಾತರ ಹಕ್ಕು ಪ್ರತಿಪಾದಿಸುತ್ತಿರುವ ಸನಾತನ ಜಾಗರಣ ಮಂಚದ ವಕ್ತಾರರಾಗಿದ್ದಾರೆ.

<><*<><>*><>

ಒಡಿಶಾದ ಸುಂದರ್‌ಘರ್ ಜಿಲ್ಲೆಯಲ್ಲಿ ಇಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ಕನಿಷ್ಠ ಐವರು ಮೃತಪಟ್ಟಿದ್ದು, ಇತರ ಏಳು ಜನರು ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

<><*<><>*><>

ಮುಂಬೈ ವಾಂಖಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೂರನೇ ಹಾಗೂ ಅಂತಿಮ ಟೆಸ್ಟ್ ಕ್ರಿಕೆಟ್ ಪಂದ್ಯದ ಎರಡನೇ ದಿನವಾದ ಇಂದು ಭಾರತದ ವಿರುದ್ಧ ನ್ಯೂಜಿಲೆಂಡ್ ಒಟ್ಟು ೧೪೩ ರನ್‌ಗಳ ಮುನ್ನಡೆ ಪಡೆದಿದೆ. ದಿನದಾಟದ ಮುಕ್ತಾಯಕ್ಕೆ ನ್ಯೂಜಿಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ೪೩.೩ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೧೭೧ ರನ್ ಗಳಿಸಿ ಆಟವಾಡುತ್ತಿದೆ. ನ್ಯೂಜಿಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೨೩೫ ರನ್ ಗಳಿಸಿದೆ. ಇದಕ್ಕೂ ಮುನ್ನ ಭಾರತ, ನಿನ್ನೆಯ ೪ ವಿಕೆಟ್ ನಷ್ಟಕ್ಕೆ ೮೬ ರನ್‌ಗಳಿಂದ ಆಟ ಮುಂದುವರೆಸಿ, ೨೬೩ ರನ್ ಗಳಿಸಿತು. ಶುಭ್‌ಮನ್‌ಗಿಲ್ ೯೦, ರಿಷಬ್ ಪಂತ್ ೬೦ ರನ್ ಗಳಿಸಿದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**